**ಸಚಿವರ ಆಪ್ತ ಶಾಖೆಗಳಲ್ಲಿ ಎಲೆಕ್ಟ್ರಾನಿಕ್ ಆಂಗ್ಲ ಬೆರಳಚ್ಚು ಯಂತ್ರಗಳ ಖರೀದಿ.**

305-ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರಾದ್) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಮುಖ್ಯಮಂತ್ರಿಗಳ ಕಛೇರಿಯೂ ಸೇರಿದಂತೆ ರಾಜ್ಯದಲ್ಲಿ ಎಲ್ಲಾ ಸಚಿವರ ಕಛೇರಿಗೂ ಎಲೆಕ್ಟ್ರಾನಿಕ್ ಆಂಗ್ಲ ಬೆರಳಚ್ಚು ಯಂತ್ರವನ್ನು ಖರೀದಿ ಮಾಡಲಾಗಿರುವುದೆ?*

*ಆ) ಹಾಗಿದ್ದಲ್ಲಿ,ಎಷ್ಟು ಎಲೆಕ್ಟ್ರಾನಿಕ್ ಬೆರಳಚ್ಚು ಯಂತ್ರಗಳನ್ನು ಕೊಂಡುಕೊಳ್ಳಲಾಗಿದೆ ಹಾಗೂ ಅವುಗಳನ್ನು ಯಾರಿಂದ ಕೊಂಡುಕೊಳ್ಳಲಾಗಿರುವುದು ?*

*ಇ) ಅದಕ್ಕೆ ತಗುಲಿದ ಪೂರ್ಣ ವೆಚ್ಚವೆಷ್ಟು ಹಾಗೂ ಒಂದೊಂದು ಎಲೆಕ್ಟ್ರಾನಿಕ್ ಬೆರಳಚ್ಚು ಯಂತ್ರಕ್ಕೆ ತಗಲುವ ವೆಚ್ಚವೆಷ್ಟು ?*

*ಈ) ಅದಕ್ಕೆ ಪ್ರತಿ ತಿಂಗಳು ತಗಲುವ ನಿರ್ವಹಣಾ ವೆಚ್ಚವೆಷ್ಟು?*

*ಉ) ಮಾನ್ಯ ಮುಖ್ಯಮಂತ್ರಿಗಳು ಇತ್ತೀಚೆಗೆ ಸರ್ಕಾರದ ಆಡಳಿತದಲ್ಲಿ ಎಲ್ಲಾ ಹಂತದಲ್ಲಿಯೂ ಕನ್ನಡದಲ್ಲಿಯೇ ವ್ಯವಹರಿಸುವುದಾಗಿ ಪ್ರಕಟಿಸಿದ್ದರೂ ಈ ರೀತಿ ದುಬಾರಿ ವೆಚ್ಚದ ಎಲೆಕ್ಟ್ರಾನಿಕ್ ಆಂಗ್ಲ ಬೆರಳಚ್ಚು ಯಂತ್ರಗಳನ್ನು ಕೊಂಡಿರುವುದು ಸರಿಯೇ?*

*ಊ) ಈ ಬಗ್ಗೆ ಸರ್ಕಾರದ ಮುಂದಿನ ಕ್ರಮವೇನು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು)

ಅ) ಹೌದು.

ಆ) 35, ಗಾಡ್ರೇಜ್ ಕಂಪೆನಿಯಿಂದ 17 ಯಂತ್ರಗಳನ್ನು, ಕಿಯಾನಿಕ್ಸ್ ಕಂಪೆನಿಯಿಂದ 18 ಯಂತ್ರಗಳನ್ನು ಖರೀದಿಸಲಾಗಿದೆ.

ಇ) ಒಟ್ಟು ವೆಚ್ಚ ರೂ. 8,60,000-00 ಸಚಿವ ಸಂಪುಟದ ಮಂತ್ರಿಗಳಿಗೆ ಕೊಟ್ಟ ಗೋದ್ರೇಜ್ ಯಂತ್ರಗಳ ಬೆಲೆ ಒಂದಕ್ಕೆ ರೂ. 26,818-00 ರಾಜ್ಯ ಸಚಿವರುಗಳಿಗೆ ಒದಗಿಸಿದ ಕಿಯಾನಿಕ್ಸ್ ಯಂತ್ರ ಒಂದರ ಬೆಲೆ ರೂ. 21,912-00.

ಈ) ಈ ಯಂತ್ರಗಳನ್ನು ಈಗ ಒಂದು ತಿಂಗಳ ಹಿಂದೆ ಖರೀದಿಸಲಾಗಿದ್ದು, ಗೋದ್ರೇಜ್ ಯಂತ್ರಕ್ಕೆ ತಿಂಗಳೊಂದಕ್ಕೆ ಅಂದಾಜು ರೂ.350-00 ವೆಚ್ಚದಲ್ಲಿ ಹಾಗೂ ಕಿಯಾನಿಕ್ಸ್ ಯಂತ್ರಕ್ಕೆ ತಿಂಗಳೊಂದಕ್ಕೆ ರೂ. 300-00 ವೆಚ್ಚದಲ್ಲಿ ಬಳಕೆ ಪದಾರ್ಥಗಳನ್ನು ಕೊಂಡುಕೊಳ್ಳಲಾಗುತ್ತಿದೆ. ವಾರ್ಷಿಕ ನಿರ್ವಹಣಾ ಒಪ್ಪಂದವನ್ನು ಸಾಧಾರಣವಾಗಿ ಒಂದು ವರ್ಷದ ನಂತರ ಸಂಬಂಧಿತ ಕಂಪನಿಯವರೊಂದಿಗೆ ಮಾಡಿಕೊಳ್ಳಲಾಗುವುದು.

ಉ) ಈ ಯಂತ್ರಗಳು ದ್ವಿಭಾಷಾ ಯಂತ್ರಗಳಾಗಿದ್ದು ಆಂಗ್ಲ ಹಾಗೂ ಕನ್ನಡ ಭಾಷೆಯಲ್ಲಿ ಬೆರಳಚ್ಚು ಮಾಡುವ ಸಾಧ್ಯತೆ ಇದೆ. ಸಚಿವರುಗಳ ಕಛೇರಿಗಳಲ್ಲಿ ಸಾಕಷ್ಟು ಕೆಲಸದ ಒತ್ತಡವಿದ್ದು ಎಲೆಕ್ಟ್ರಾನಿಕ್ ಯಂತ್ರಗಳನ್ನು ಉಪಯೋಗಿಸುವುದರಿಂದ ಶೀಘ್ರವಾಗಿ ಹಾಗೂ ಸ್ವಚ್ಛವಾಗಿ ಬೆರಳಚ್ಚು ಮಾಡಲು ಸಹಾಯವಾಗಿದೆ.

ಊ) ಉದ್ಭವಿಸುವುದಿಲ್ಲ.

**ಆಶ್ರಯ ಯೋಜನೆಯಡಿಯಲ್ಲಿ ಮನೆ ನಿವೇಶನಗಳ ವಿತರಣೆ**

307 - ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರಾದ್) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಶ್ರಯ ಯೋಜನೆಯಡಿಯಲ್ಲಿ ಸರ್ಕಾರವು ರಾಜ್ಯದಲ್ಲಿ ಇದುವರೆಗೆ ಎಷ್ಟು ಮನೆ ನಿವೇಶನಗಳನ್ನು ಹಂಚಿದೆ ?
(ಜಿಲ್ಲಾವಾರು ಅಂಕಿ ಅಂಶಗಳನ್ನು ಕೊಡುವುದು)

ಆ) ಈ ವರ್ಷದಲ್ಲಿ ಈ ಮೇಲ್ಕಂಡ ಯೋಜನೆಯಡಿಯಲ್ಲಿ ಎಷ್ಟು ಮನೆ ನಿವೇಶನಗಳನ್ನು ಸರ್ಕಾರ ಹಂಚುವ ಗುರಿಯನ್ನು ಹೊಂದಿದೆ?

ಇ) ಇದಕ್ಕಾಗಿ ಅಗತ್ಯ ಇರುವ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಸರ್ಕಾರವು ಕ್ರಮವನ್ನು ಕೈಗೊಂಡಿದೆ.

ಈ) ಖಾಸಗಿಯವರಿಂದ ಈ ಯೋಜನೆಗಾಗಿ ಭೂಮಿಯನ್ನು ಕೊಂಡುಕೊಳ್ಳಲು ಸರ್ಕಾರ ಎಷ್ಟು ಹಣವನ್ನು ಖರ್ಚು ಮಾಡಿದೆ. ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು)

ಅ) ಜನವರಿ 92ರ ಅಂತ್ಯದವರೆಗೆ ರಾಜ್ಯದಲ್ಲಿ 3,51,671 ನಿವೇಶನಗಳನ್ನು ಹಂಚಲಾಗಿದೆ. (ಜಿಲ್ಲಾವಾರು ವಿವರ ಅನುಬಂಧ 'ಅ'ನಲ್ಲಿದೆ)

ಆ) ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ 1000ಗಳಂತೆ ಕನಿಷ್ಠ 2,24,000 ನಿವೇಶನ ಹಂಚುವ ಗುರಿ ಇತ್ತು.

ಇ) ಹೌದು. (ಸರ್ಕಾರಿ ಭೂಮಿ ಲಭ್ಯವಿಲ್ಲದ ಕಡೆ)

ಈ) ಆಶ್ರಯ ಯೋಜನೆಗೆ ಖಾಸಗಿ ಭೂಮಿಯನ್ನು ಕೊಂಡುಕೊಳ್ಳಲು ಒಟ್ಟು 2,24,73,301-35 ರೂ. ಖರ್ಚು ಮಾಡಲಾಗಿದೆ.

## ಅನುಬಂಧ 'ಅ'

| ಜಿಲ್ಲೆಗಳು | ಜಿಲ್ಲಾವಾರು ಜನವರಿ 92ರವರೆಗೆ ನಿವೇಶನ ಹಂಚಿಕೆ ವಿವರ |
|---|---|
| ಬೆಂಗಳೂರು (ನಗರ) | 4821 |
| ಬೆಂಗಳೂರು (ಗ್ರಾ) | 15653 |
| ತುಮಕೂರು | 20273 |
| ಕೋಲಾರ | 17814 |
| ಚಿತ್ರದುರ್ಗ | 21204 |
| ಶಿವಮೊಗ್ಗ | 32696 |
| ಚಿಕ್ಕಮಗಳೂರು | 10345 |
| ಮಂಡ್ಯ | 17499 |
| ಮೈಸೂರು | 17774 |
| ಹಾಸನ | 16415 |
| ಕೊಡಗು | 5210 |
| ದಕ್ಷಿಣ ಕನ್ನಡ | 18760 |
| ಉತ್ತರ ಕನ್ನಡ | 8154 |
| ಧಾರವಾಡ | 24321 |
| ಬಿಜಾಪುರ | 27019 |
| ಬೆಳಗಾಂ | 10730 |

| | |
|---|---|
| ಬಳ್ಳಾರಿ | 19092 |
| ರಾಯಚೂರು | 23587 |
| ಗುಲ್ಬರ್ಗಾ | 27800 |
| ಬೀದರ್ | 6502 |
| ಒಟ್ಟು | **351671** |

**ಬೆಂಗಳೂರು ನಗರ ಕಾರ್ಪೋರೇಷನ್ ಕೌನ್ಸಿಲ್ ಹಾಲ್ ನಿರ್ಮಾಣಕ್ಕೆ ತಗುಲಿದ ವೆಚ್ಚ.**

309-ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರ ಕಾರ್ಪೋರೇಷನ್‌ನಿಂದ ನಿರ್ಮಿಸುತ್ತಿರುವ ಹೊಸ ಕೌನ್ಸಿಲ್ ಹಾಲ್ ನಿರ್ಮಾಣಕ್ಕೆ ತಗಲಿರುವ ಒಟ್ಟು ಹಣದ ವೆಚ್ಚವೆಷ್ಟು ?*

ಆ) *ಈಗ ಅದು ಯಾವ ಹಂತದಲ್ಲಿದೆ ಹಾಗೂ ಅದು ಯಾವಾಗ ಮುಗಿಯಲಿದೆ?*

ಇ) *ಈ ಹೊಸ ಕೌನ್ಸಿಲ್ ಹಾಲ್ ನಿರ್ಮಾಣ ಮಂದಗತಿಯಲ್ಲಿ ನಡೆಯಲು ಕಾರಣಗಳೇನು, ಹಾಗೂ ಅದರ ಬಗ್ಗೆ ತೆಗೆದುಕೊಂಡ ಕ್ರಮಗಳೇನು ?*

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು)

ಅ) ಅಂದಾಜು 300.00 ಲಕ್ಷ

ಆ) ಕೆಲಸವು ಪ್ರಗತಿಯಲ್ಲಿದ್ದು ಇನ್ನು ಆರು ತಿಂಗಳಲ್ಲಿ ಮುಗಿಯುಬಹುದೆಂದು ಉದ್ದೇಶಿಸಲಾಗಿದೆ.

ಇ) ಹೊಸ ಕೌನ್ಸಿಲ್ ಹಾಲ್ ನಿರ್ಮಾಣದ ನಿವೇಶನದಲ್ಲಿ ಹಾಲಿ ಇದ್ದ ಕಟ್ಟಡಗಳನ್ನು ಕೆಡವಿ ನಿವೇಶನವನ್ನು ಗುತ್ತಿಗೆದಾರರಿಗೆ ವಹಿಸಿಕೊಡುವುದರಲ್ಲಿ ಮತ್ತು ಹೊಸ ಕಟ್ಟಡವನ್ನು ಮೊದಲು ಕಟ್ಟಲು ಉದ್ದೇಶಿಸಲಾಗಿದ್ದ ಸ್ಥಳದಿಂದ 60 ಮೀ.ನಷ್ಟು ಸ್ಥಳಾಂತರಿಸಿದ್ದರಿಂದ ಪ್ರಾರಂಭದಲ್ಲಿ ಕೆಲಸವು ವಿಳಂಬವಾಗಿದೆ.

**ಸಣ್ಣ ಉಳಿತಾಯ ಇಲಾಖೆಯವರ ಪ್ಯಾಕೆಟ್ ಕ್ಯಾಲೆಂಡರ್‌ಗಳ ಸಂಖ್ಯೆ.**

310-ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ) : ಮಾನ್ಯ ಸಣ್ಣ ಉಳಿತಾಯ, ರಾಜ್ಯ ಲಾಟರಿ ಹಾಗೂ ವಿಮಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *1992ನೇ ಜನವರಿಯಲ್ಲಿ ವಿತರಣೆ ಮಾಡಿದ ಸಣ್ಣ ಉಳಿತಾಯ ಪ್ಯಾಕೆಟ್ ಕ್ಯಾಲೆಂಡರುಗಳು ಮತ್ತು ಗೋಡೆಯ ಕ್ಯಾಲೆಂಡರುಗಳು ಒಟ್ಟು ಸಂಖ್ಯೆ ಎಷ್ಟು ?*

ಆ) *ಪ್ರತಿಗೋಡೆಯ ಕ್ಯಾಲೆಂಡರು ಮತ್ತು ಪ್ಯಾಕೆಟ್ ಕ್ಯಾಲೆಂಡರುಗಳಿಗೆ ತಗುಲಿದ ವೆಚ್ಚವೆಷ್ಟು ?*

ಇ) *ಈ ಕ್ಯಾಲೆಂಡರುಗಳನ್ನು ಎಲ್ಲಿ ಮುದ್ರಿಸಲಾಯಿತು ?*

ಈ) *ಈ ಕ್ಯಾಲೆಂಡರುಗಳನ್ನು ಸರ್ಕಾರಿ ಮುದ್ರಣಾಲಯದಲ್ಲಿ ಮುದ್ರಿಸದಿರುವ ಕಾರಣಗಳೇನು ?*

ಶ್ರೀ ಟಿ.ಎಂ. ಮಂಜುನಾಥ್ (ಸಣ್ಣ ಉಳಿತಾಯ, ರಾಜ್ಯ ಲಾಟರಿ ಹಾಗೂ ವಿಮಾ ರಾಜ್ಯ ಮಂತ್ರಿಗಳು) :

ಅ) ಪ್ಯಾಕೆಟ್ ಕ್ಯಾಲೆಂಡರು : ಮೂರು ಲಕ್ಷ (ಉಚಿತ ವಿತರಣೆ)